

# ಸಿಟ್ಟಾದ ಸಂಜನಾ

ಡ್ರಗ್ಸ್ ಪ್ರಕರಣದಲ್ಲಿ ಸ್ಯಾಂಡಲ್‌ವುಡ್‌ನ ರಾಗಿಣಿ ದ್ವಿವೇದಿ ಮತ್ತು ಸಂಜನಾ ಗಲ್ರಾನಿ ಇಬ್ಬರೂ ಬಂಧನಕ್ಕೊಳಗಾಗಿದ್ದು, ಈಗ ಇಬ್ಬರೂ ಜಾಮೀನಿನ ಮೇಲೆ ಹೊರಬಂದಿದ್ದು ಗೊತ್ತಿರುವ ಸಂಗತಿಯೇ. ಮನೆಗೆ ಬಂದ ಒಂದು ತಿಂಗಳ ತರುವಾಯ ಸಂಜನಾ ಇನ್‌ಸ್ಟಾಗ್ರಾಮ್ ಮೂಲಕ ತಮ್ಮ ಅಭಿಮಾನಿಗಳಿಗೆ ಮುಖಾಮುಖಿಯಾಗಿದ್ದಾರೆ. ಹಾಗೆಯೇ, ತಮ್ಮನ್ನು ಟೀಕಿಸಿದವರು, ಟ್ರೋಲ್ ಮಾಡಿದವರ ವಿರುದ್ಧ ಕಿಡಿಕಾರಿದ್ದಾರೆ ಕೂಡ. ಇತ್ತೀಚೆಗೆ ಇನ್‌ಸ್ಟಾಗ್ರಾಮ್ ಲೈವ್ ಬಂದಿದ್ದ ಅವರ ಕೈಯಲ್ಲಿ ಕುಂಚವಿತ್ತು. ಕ್ಯಾನ್ವಾಸ್ ಮೇಲೆ ಅವರೇ ಬರೆದ ಚಿತ್ರವಿತ್ತು. ‘ಈ ಚಿತ್ರ ಬರೆಯಲು ಇಡೀ ದಿನ ತೆಗೆದುಕೊಂಡೆ. ಆದರೆ ಈ ಶ್ರಮ ಸಾರ್ಥಕ ಅನಿಸಿದೆ. ಇದನ್ನು ನನ್ನ ಕಷ್ಟದ ಸಮಯದಲ್ಲಿ ನನ್ನ ಜೊತೆಗೆ ನಿಂತಿರುವ ಪ್ರತಿಯೊಬ್ಬ ಅಭಿಮಾನಿಗಾಗಿ ಪ್ರೀತಿಯಿಂದ ರಚಿಸಿದ್ದೇನೆ’ ಎಂದು ಭಾವುಕವಾಗಿ ನುಡಿದಿದ್ದಾರೆ. ಹಾಗೆಯೇ, ಟ್ರೋಲ್ ಮಾಡುವವರನ್ನು ತರಾಟೆಗೆ ತೆಗೆದುಕೊಂಡಿರುವ ಅವರು, ‘ನಾನು ಪಟ್ಟಿರುವ ಕಷ್ಟ ನಿಮಗೇನು ಗೊತ್ತು? ನಾನು ಕ್ರೈಮ್ ಮಾಡಿದ್ದೇನೆ ಎಂದು ನಿಮಗೆ ಗೊತ್ತಿದೆಯೇ? ಟ್ರೋಲ್ ಮಾಡುವವರು ನನ್ನನ್ನು ಫಾಲೊ ಮಾಡಬೇಡಿ’ ಎಂದು ಸಿಟ್ಟಿನಿಂದ ಹೇಳಿದ್ದಾರೆ.

ಸದ್ಯಕ್ಕೆ ಆರೋಗ್ಯ ಹದಗೆಟ್ಟಿರುವುದರಿಂದ ಸಂಜನಾ ಮನೆಯಲ್ಲಿಯೇ ವಿಶ್ರಾಂತಿ ಪಡೆಯುತ್ತಿದ್ದಾರಂತೆ. ಆರೋಗ್ಯ ಸುಧಾರಿಸಿದ ಕೂಡಲೇ ಸಾಮಾಜಿಕ ಜಾಲತಾಣಗಳಿಗೆ ಮರಳುತ್ತೇನೆ ಎಂಬ ಭರವಸೆಯನ್ನೂ ಅವರು ನೀಡಿದ್ದಾರೆ.

# ಶಾನ್ವಿ ‘ಬ್ಯಾಂಗ್’

‘ಅವನೇ ಶ್ರೀಮನ್ನಾರಾಯಣ’ ಸಿನಿಮಾ ನಂತರ ಶಾನ್ವಿ ನಟನಾಬದುಕು ರಂಗೇರುತ್ತಲೇ ಇದೆ. ರಚಿತಾರಾಮ್ ಹೊರನಡೆದ ‘ಕಸ್ತೂರಿ ಮಹಲ್’ ಸಿನಿಮಾದಲ್ಲಿ ನಟಿಸುವ ಅವಕಾಶ ಶಾನ್ವಿ ಅವರನ್ನು ಅರಸಿಕೊಂಡು ಬಂದಿತ್ತು. ಮಹಿಳಾಪ್ರಧಾನ ಕಥೆಯುಳ್ಳ ಆ ಚಿತ್ರೀಕರಣ ಮುಗಿಯುತ್ತಿರುವ ಹಾಗೆಯೇ ಶಾನ್ವಿ ಇನ್ನೊಂದು ಚಿತ್ರ ಘೋಷಣೆಯಾಗಿದೆ. ಅದರ ಹೆಸರು ‘ಬ್ಯಾಂಗ್’. ಗ್ಯಾಂಗ್‌ಸ್ಟರ್ ಕಥೆಯುಳ್ಳ ಈ ಚಿತ್ರದಲ್ಲಿ ಶಾನ್ವಿ ವಿಶಿಷ್ಟ ಪಾತ್ರವೊಂದರಲ್ಲಿ ನಟಿಸುತ್ತಿದ್ದಾರೆ. ಗಣೇಶ್ ಪರಶುರಾಮನ್ ನಿರ್ದೇಶಿಸುತ್ತಿರುವ ‘ಬ್ಯಾಂಗ್’ ಸಿನಿಮಾದಲ್ಲಿ ಕೇವಲ ಏಳು ಪಾತ್ರಗಳು ಇರಲಿವೆ. ಎರಡೇ ದಿನಗಳಲ್ಲಿ ನಡೆಯುವ ಕಥೆಯನ್ನು ತೆರೆಯ ಮೇಲೆ ರೋಮಾಂಚಕಾರಿಯಾಗಿ ಸೆರೆಹಿಡಿಯುವ ಯೋಚನೆ ನಿರ್ದೇಶಕರದ್ದು. ಈಗಾಗಲೇ ಬೆಂಗಳೂರಿನಲ್ಲಿ ಎರಡು ಹಂತರ ಚಿತ್ರೀಕರಣ ನಡೆದಿದ್ದು, ಚಿತ್ರದ ಉಳಿದ ಪಾತ್ರಗಳಲ್ಲಿ ಯಾರು ನಟಿಸಿದ್ದಾರೆ ಎಂಬ ವಿವರಗಳನ್ನು ಹಂತಹಂತವಾಗಿ ಚಿತ್ರತಂಡ ಬಿಡುಗಡೆ ಮಾಡಲಿದೆ.

ಪೂಜಾ ವಸಂತ್‌ಕುಮಾರ್ ಅವರು ಹಣ ಹೂಡಿರುವ ಈ ಸಿನಿಮಾಗೆ ರಿತ್ವಿಕ್ ಮುರಳಿಧರ್ ಸಂಗೀತ ಸಂಯೋಜನೆ, ಉದಯಲೀಲ ಛಾಯಾಗ್ರಹಣ ಮಾಡಿದ್ದಾರೆ. ಫೆಬ್ರುವರಿಯಲ್ಲಿ ಮೂರನೇ ಹಂತದ ಚಿತ್ರೀಕರಣವನ್ನು ಮಂಗಳೂರಿನಲ್ಲಿ ನಡೆಸುವ ಯೋಜನೆಯನ್ನು ಚಿತ್ರತಂಡ ಹಾಕಿಕೊಂಡಿದೆ.

